ಓ.ಎಸ್.ಸಂ. **395/2014** ಪಿ.ಡಬ್ಲೂ.**1**

<u>ದಿನಾಂಕ **15-12-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ **2** ನೇ ಪ್ರತಿವಾದಿ ಪರ ಶ್ರೀ ಆರ ಡಿ ಪಿ ವಕೀಲರಿಂದಃ</u>

1) ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಾವೆ ತಯಾರಿಸಲು ನಾನು ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ. ದಾವೆಯನ್ನು ದಾಖಲಿಸುವ ಮೊದಲು 1 ನೇ ಪ್ರತಿವಾದಿಗೆ ನಾನು ಶ್ರೀ ವಿ ಜೆ ಗಾಂಧಿ ವಕೀಲರ ಮೂಲಕ ನೋಟೀಸು ಕೊಟ್ಟಿದ್ದೆ. ನೋಟೀಸು ಕೊಟ್ಟ ದಿನಾಂಕ ನೆನಪಿಲ್ಲ. ಸದರಿ ನೋಟೀಸಿನ ಕಚೇರಿ ಪ್ರತಿ, ಅಂಚೆ ರಶಿದಿ ಮತ್ತು ಸ್ವೀಕೃತಿಯನ್ನು ನಾನು ಈ ಪ್ರಕರಣದಲ್ಲಿ ಹಾಜರು ಪಡಿಸಿದ್ದೇನೆ. ನಾನು ಅಂತಹ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ನೋಟಿಸು ಕೊಟ್ಟು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2) 1 ನೇ ಪ್ರತಿವಾದಿ ನನಗೆ 2010 ರಿಂದ ಪರಿಚಯ. 1 ನೇ ಪ್ರತಿವಾದಿ ಮತ್ತು ನನ್ನ ಜಮೀನು ಒಂದಕ್ಕೊಂದು ಹೊಂದಿ ಕೊಂಡಿವೆ ಎಂದರೆ ಸರಿ. ಈ ದಾವೆಯನ್ನು ಸರ್ವೆ ನಂಬರ 172/ಓ ಹಿಸ್ಸಾ 2 ಕ್ಕೆ ಸಂಬಂದ ಪಟ್ಟಂತೆ ದಾಖಲಿಸಿದ್ದೇನೆ. ನಾನು ದಾವೆಯಲ್ಲಿ ಈಗ ಹೇಳಿದ ಸರ್ವೆ ನಂಬರನ್ನು ಹೇಳಿಲ್ಲ ಮತ್ತು ಅದರ ಉತಾರ ಪತ್ರಿಕೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 172/ಓ ಹಿಸ್ಸಾ 2 ಸಂಬಂಧ ಪಟ್ಟಂತೆ ನಾನು ಯಾವ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮನೆತನದ ಬಗ್ಗೆ ನನಗೆ ಮಾಹಿತಿ ಇದೆ. ಅವರು 3 ಜನ ಸಹೋದರರು ಇರುತ್ತಾರೆ. ಅವರ ಹೆಸರು ದುಂಡಪ್ಪ ಸಿದ್ದಪ್ಪ ಕಗ್ಗಣ್ಣವರ, ಬೀರೇಶ ಸಿದ್ದಪ್ಪ ಕಗ್ಗಣ್ಣವರ/ಪ್ರತಿವಾದಿ ನಂ.1, ಗ್ಯಾನಪ್ಪ ಸಿದ್ದಪ್ಪ ಕಗ್ಗಣ್ಣವರ ಇರುತ್ತಾರೆ. ಈ ದಾವೆ ಸಲ್ಲಿಸುವ ಮೊದಲು ಉತಾರ ಪತ್ರಿಕೆಗಳನ್ನು ವೈಯಕ್ತಿಕವಾಗಿ ಪರಿಶೀಲನೆ ಮಾಡಿದ್ದೆ. ಮಹಾದೇವ ಶಿವಲಿಂಗಪ್ಪ ಈಟಿ ನನ್ನ ಅಣ್ಣ. 2014-15 ನೇ ಸಾಲಿನಲ್ಲಿ ಸರ್ವೆ ನಂಬರ 172/ಓ ಒಟ್ಟು ಕ್ಷೇತ್ರದ ಪೈಕಿ 4 ಎಕರೆ 7 ಗುಂಟೆ ಮಹಾದೇವ ಶಿವಲಿಂಗಪ್ಪ ಈಟಿ ಇವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಜಮೀನು ಆತನಿಗೆ ಯಾವ ಆದಾರದ ಮೇಲೆ ಬಂದಿತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾವು ಸಹೋದರರು 2010 ರಿಂದ ಬೇರೆ ಬೇರ ಆಗಿದ್ದೇವೆ. ಸರ್ವೆ ನಂಬರ 172/ಓ ಒಟ್ಟು ಕ್ಷೇತ್ರದ ಪೈಕಿ 4 ಎಕರೆ 7 ಗುಂಟೆ ಜಮೀನು ಮಹಾದೇವ ಶಿವಲಿಂಗಪ್ಪ ಈಟಿ ರವರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಅವರು ಒಟ್ಟು ಕುಟುಂಬದದಿಂದ ಬೇರೆ ಯಾದ ನಂತರ ತೆಗೆದುಕೊಂಡಿದ್ದಾರೆ ಎಂದರೆ ಸರಿ. ನಾನು ಒಕ್ಕಲುತನ ಮಾಡುತ್ತೇನೆ. ಅದನ್ನು ಬಿಟ್ಟು ಬೇರೆ ಉದ್ಯೋಗ ಮಾಡುವುದಿಲ್ಲ. ನನ್ನ ಹೆಸರಿನಲ್ಲಿ 5 ಎಕರೆ ಜಮೀನು ಇರುತ್ತದೆ. ನನಗೆ ಇಬ್ಬರು ಜನ ಗಂಡು ಮಕ್ಕಳು. ಅವರ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನಾನು ಒಕ್ಕಲುತನದಿಂದ ಬರುವ ಉತ್ಪನದಿಂದ ಮನೆ ನಡೆಸುತ್ತಿದ್ದೇನೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

**ಓ.ಹೆ.ಕೆ.ಸರಿ ಇದೆ.**

**(ಅಶೋಕ ಆರ್ ಹೆಚ್)**
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.